

# ದೇವರು! ವಿಜ್ಞಾನಿಗಳ ನಂಬಿಕೆಯೇನು?

'ನಮ್ಮ ಅಳತೆಯನ್ನು ಮೀರಲಾರದ ದೇವರು' ಎನ್ನುವುದು ದೇವರ ಕುರಿತು ಶಿವರಾಮ ಕಾರಂತರ ಬರಹವೊಂದರ ಶೀರ್ಷಿಕೆ. ಈ ದೇವರು ಯಾರನ್ನೂ ಬಿಟ್ಟಿಲ್ಲ. ದೇವರನ್ನು ನಂಬುವವರ ಮಾತಿರಲಿ, ನಂಬದವರನ್ನೂ ದೇವರ ಅಸ್ತಿತ್ವದ ಪ್ರಶ್ನೆ ಕಾಡಿದೆ. ವಿಜ್ಞಾನಿಗಳು ಕೂಡ ದೇವರ ಅಸ್ತಿತ್ವದ ಕುರಿತ ಜಿಜ್ಞಾಸೆಯಿಂದ ಹೊರತಾಗಿಲ್ಲ.

■ ಲಕ್ಷ್ಮೀದೇವಿ ಪಾಟೀಲ

ದೇವರ ಅಸ್ತಿತ್ವದ ಬಗೆಗಿನ ಜಿಜ್ಞಾಸೆ ಇಂದು ನಿನ್ನೆಯದಲ್ಲ. 15ನೇ ಶತಮಾನದ ಗೆಲಿಲಿಯೋನಿಂದ, 20ನೇ ಶತಮಾನದ ಸ್ಟೀಫನ್ ಹಾಕಿಂಗ್ಸ್‌ನಂತಹ ಜಗತ್ತು ಕಂಡ ಶ್ರೇಷ್ಠ ವಿಜ್ಞಾನಿಗಳಿಗೆ, ತತ್ವಜ್ಞಾನಿಗಳಿಗೆ, ದಾರ್ಶನಿಕರಿಗೂ ದೇವರ ಇರುವಿನ ಬಗ್ಗೆ ಭಿನ್ನಾಭಿಪ್ರಾಯವಿದೆ. ಜೀವಿತ ಕಾಲದ ಎಷ್ಟೋ ವರ್ಷಗಳ ಅವಧಿಯನ್ನು ಸಂಶೋಧನೆಯಲ್ಲಿಯೇ ಸವೆಸಿ, ಪ್ರಯೋಗಾಲಯಗಳಲ್ಲಿಯೇ ಕಳೆದು, ಸೋಸಿ, ಅಳೆದು, ತೂಗಿ, ವಿಶ್ಲೇಷಿಸಿ, ಸಿದ್ಧಾಂತಗಳು, ನಿಯಮಗಳು, ಸೂತ್ರಗಳನ್ನು ರೂಪಿಸಿದ ಅನೇಕ ವಿಜ್ಞಾನಿಗಳಿಗೆ ಈ ಬಗ್ಗೆ ಗೊಂದಲವಿದೆ. ಐನ್‌ಸ್ಟೈನ್ ಮತ್ತು ನ್ಯೂಟನ್‌ರಂತಹ ಅಪ್ರತಿಮರೂ ಅಗೋಚರ ಶಕ್ತಿಯ ಅಸ್ತಿತ್ವದ ಬಗ್ಗೆ ಸಹಮತ ವ್ಯಕ್ತಪಡಿಸಿದ್ದಾರೆ. ಇನ್ನೊಂದೆಡೆ ನೊಬೆಲ್ ಪುರಸ್ಕೃತರೂ ಸೇರಿದಂತೆ ಅನೇಕ ವಿಜ್ಞಾನಿಗಳು ದೇವರ ಇರುವಿಕೆಯನ್ನು ಸಾರಾಸಗಟಾಗಿ ತಳ್ಳಿಹಾಕಿದ್ದಾರೆ.

ನಮ್ಮ ಬ್ರಹ್ಮಾಂಡದ ಹುಟ್ಟು, ನಿರಂತರತೆ, ನಿಖರತೆ, ಅಂತ್ಯಗಳ ಕುರಿತಾಗಿ ಹಲವಾರು ಪ್ರಶ್ನೆಗಳಿವೆ. ಅವುಗಳಿಗೆ ಯಾವುದೇ ವೈಜ್ಞಾನಿಕ ಆಧಾರ ಇಲ್ಲದ್ದರಿಂದ ಸಮರ್ಪಕವಾಗಿ ಉತ್ತರ ಹುಡುಕುವುದು ಕಷ್ಟ. (ಅಮ್ಮನ ಸೀರೆ ಮಡಿಸಲಾಗದು, ಅಪ್ಪನ ದುಡ್ಡು ಎಣಿಸಲಾಗದು ಎಂಬ ಒಗಟಿನಂತೆ). ಬ್ರಹ್ಮಾಂಡದ ರಹಸ್ಯ ಭೇದಿಸುತ್ತ ಹೋದಂತೆಲ್ಲ ಅದು ಇನ್ನಷ್ಟು ಜಟಿಲವಾಗುತ್ತಿದೆ. ಯಾವ ಆಧುನಿಕ ಭೌತವಿಜ್ಞಾನವೂ ವಿಶ್ವದ ಸಂಕೀರ್ಣವಾದ ಅಸ್ತಿತ್ವದ ಬಗೆಗಿನ ಪ್ರಶ್ನೆಗಳಿಗೆ ಉತ್ತರಿಸಲು ಸಾಧ್ಯವಾಗಿಲ್ಲ. ಜೀವ ಉಗಮ ಹೀಗಾಗಿರಬಹುದು ಎಂದು ಊಹಿಸಬಹುದೇ ಹೊರತು, ಖಚಿತವಾಗಿ ಹೀಗೇ ಆಗಿದೆ ಎಂದು ಹೇಳಲು ವೈಜ್ಞಾನಿಕ ಪುರಾವೆಗಳಿಲ್ಲ. ಧಾತುವಿನ ಒಂದು ಸಣ್ಣ ಕಣದ ವರ್ತನೆಯನ್ನು ವಿವರಿಸಲು ಪುಟಗಟ್ಟಲೆ ಗಣಿತ ಸೂತ್ರಗಳನ್ನು ಬರೆಯಬೇಕಾಗುತ್ತದೆ, ಒಂದು ಚಿಕ್ಕ ಕಣವೂ ಅಷ್ಟೊಂದು ಸಂಕೀರ್ಣತೆಯಿಂದ ಕೂಡಿದೆ. ಅತ್ಯಂತ ಸಾಧಾರಣವಾಗಿ ಕಾಣುವ ನಿಸರ್ಗದ ಪುಟ್ಟ ವಸ್ತುವಿಗೂ ಒಂದು ನಿರ್ದಿಷ್ಟವಾದ ರಚನೆ, ನೀಲನಕ್ಷೆ ಇದೆ. ಪ್ರತಿಯೊಂದು ಪ್ರಾಣಿ, ಪಕ್ಷಿ, ಮನುಷ್ಯ, ಕ್ರಿಮಿ, ಕೀಟ, ಸರೀಸೃಪಗಳು, ಸಸ್ತನಿಗಳಿಗೆ ಜೀವಿಸಲು ಅನುಕೂಲಕರವಾದ ರಚನೆ, ವಿನ್ಯಾಸ ಹಾಕಿ ಕೊಟ್ಟವರು ಯಾರು? ಇದು ಸಹಸ್ರಮಾನಗಳಿಂದ ಬಗೆಹರಿಯದ ಪ್ರಶ್ನೆ.



> ಯಾವುದೋ ಒಂದು ಶಕ್ತಿ ನಮ್ಮನ್ನು ನಿಯಂತ್ರಿಸುತ್ತಿದೆ. ಮನುಷ್ಯನ ಪರೋಪಕಾರ ಗುಣ, ಕರುಣೆಗಳಲ್ಲಿಯೇ ದೇವರಿದ್ದಾನೆ.
>
> -ಸರ್ ಐಸ್ಯಾಕ್ ನ್ಯೂಟನ್